ಬಿಡ್ತಾನ? ಅವ್ರೂ ಜನ ಕರ್ಕಂಡ್ ಬಂದು ಗಲಾಟೆ ಮಾಡಿ, ಮುದುಕಿಯ ಆಟೋಕ್ಕೆ ಹಾಕಿಕೊಂಡು ಮತ್ತೆ ವಾಪಾಸ್ ತಗೊಂಡ್ ಹೋಗಿದ್ದ' ಎಂದ ಗುಂಡೇಗೌಡ. ಕೇಳುತ್ತಿದ್ದವರಿಗೆ ಅವನ ಮಾತು ಮತ್ತಷ್ಟು ಜಟಿಲವಾಯಿತು.

'ಅದ್ಯಾಕೆ ಹಂಗೆ ಮಾತಾಡ್ತಾ ಇದಾರೆ ಅವ್ರು' ಎಂದು ಗುಂಡೇಗೌಡನ ಮುಖ ನೋಡತೊಡಗಿದರು.

'ಅದೆಲ್ಲಾ ಒಂದು ದೊಡ್ಡ ಕಥೆ... ಈಚಿನವ್ರು ನೀವು... ನಿಮಗೆಲ್ಲಾ ಅಷ್ಟು ಸುಲಭಕ್ಕೆ ಅರ್ಥ ಆಗದಿಲ್ಲ. ಹೇಳ್ತಿನಿ, ಈ ಕಡೆ ಅಡೆಗೆ ಬನ್ನಿ... ಆ ಮುಂಡೆಮಕ್ಳ ಮೆರವಣಿಗೆ ಈ ಕಡೆಗೇ ಬರ್ತಾ ಐತೆ... ನಮ್ಮ ಎಲ್ಲಾದರೂ ತುಣುದು ಗಿಣುದು ಹಾಕಿಬಿಟ್ಟಾರು' ಎಂದ.

* * *

ನೂರೈವತ್ತಕ್ಕೂ ಹೆಚ್ಚು ಮನೆ ಇರುವ ಈ ಊರಲ್ಲಿ ಅದೆಷ್ಟು ಬೇರೆ ಬೇರೆ 'ಬಡ್ಡೆ'ಯ ಕುಟುಂಬಗಳು! ಆಯಾ ಬಡ್ಡೆಗೆ ಅದೇನೇನು ಹೆಸರುಗಳು! ಕೆಲವು ಬಡ್ಡೆಯವರಿಗೆ ವಂಶವೃಕ್ಷದ ಪ್ರಕಾರ ಅವರ ಮೂಲ ಪುರುಷನ ಹೆಸರೇ ಉಳಿದುಕೊಂಡಿದ್ದರೆ, ಇನ್ನು ಕೆಲವಕ್ಕೆ ಅವರ ಪರಿಸರಕ್ಕೆ ಹೊಂದಿಕೊಂಡಂತೆ ಹೆಸರು. ಮಾರೆಗೌಡರ ಮನೆ, ಗಂಡಿಮನೆ, ಬಾವಿಮನೆ, ಓಣಿಮನೆ , ಕಂಬ್ಳಿಗೌಡ್ರಮನೆ, ಹೀಗೆ... ಅದರಲ್ಲಿ ಈ 'ಹಂಚಿನ ಮನೆ' ಬಡ್ಡೆಯೂ ಒಂದು. ಆ ಬಡ್ಡೆಯವರೇ ಈಗ ಹತ್ತು ಹನ್ನೆರಡು ಕುಟುಂಬ ಆಗಿದಾರೆ.

ಅದೇ ಹಂಚಿನ ಮನೆ ಬಡ್ಡೆಯ ದ್ಯಾವಪ್ಪಗೌಡ್ರ ಹೆಂಡತಿಯೇ ಈ ಮುದುಕಿ ಕಾಳಮ್ಮ.

ಊರವರ ಹೆಚ್ಚಿನ ಮಟ್ಟಿಗಿನ ಗದ್ದೆ ಜಮೀನೆಲ್ಲಾ ಪಶ್ಚಿಮ ದಿಕ್ಕಿಗೇ ಇರುವುದು. ಅದರಾಚೆಗೆ ಸ್ವಲ್ಪ ದೀಣೆ. ಮತ್ತೆಲ್ಲಾ ಕಾಡು. ಅವೆಲ್ಲಾ ಯಾಲಕ್ಕಿ ಹನಾಲುಗಳು. ಇನ್ನು ಊರಿನ ಪೂರ್ವದ ಅಂಚಿನಲ್ಲಿ ತಾಲೂಕು ಕೇಂದ್ರದ ಕಡೆಯಿಂದ ಉದ್ದಕ್ಕೆ ತಗ್ಗಿನ ಕಡೆ ಸಾಗಿ ಹೋಗುವ ರಾಜ್ಯ ಹೆದ್ದಾರಿ ಊರ ಗಡಿ ಭಾಗದಂತಿದೆ. ಅದರಾಚೆಗಿನ ಸಣ್ಣ ಕೆರೆ ಏರಿಯ ಕೆಳಗೆ ಉದ್ದಕ್ಕೆ ಒಂದು ಸಣ್ಣ ಗದ್ದೆಬಯಲು. ಅದರಾಚೆಗೆ ಗದ್ದೆಗೆ ತಾಗಿಕೊಂಡಂತೆ ಉದ್ದಕ್ಕೆ ಎತ್ತರದ ದೀಣೆ. ಅದರ ಒಂದು ಅಂಚಿನ ಕಾಡಿನಲ್ಲಿ ದೇವಸ್ಥಾನ ಇರುವುದರಿಂದ ಆ ದೀಣೆಗೆ 'ದೇವರಬನದ ದೀಣೆ' ಎಂದೇ ಹೆಸರು. ಅಲ್ಲಿ ಹಿಂದಿನಿಂದಲೂ ಯಾರದೇ ಸ್ವಂತ ಹಕ್ಕಿನ ಜಾಗಕ್ಕೆ ಆಸ್ಪದವಿಲ್ಲ. ಅದು ಈಚಿನವರೆಗೂ ಊರೊಟ್ಟಿನ ಸರ್ಕಾರಿ ಗೋಮಾಳ. ಅದರಾಚೆಗೆ ತಗ್ಗಿನಲ್ಲಿ ಊರವರಿಗೆ ಸೇರಿದ ಸಣ್ಣದೊಂದು ಗದ್ದೆಬಯಲು. ಗದ್ದೆಯಾಚೆಗೆ ಕೆಲವರ ಹಿಡುವಳಿಯ ದನ ಮೇಯುವ ಕುರೋವು.

ಹಂಚಿನಮನೆ ದ್ಯಾವಪ್ಪಗೌಡರಿಗೆ ಮದುವೆಯಾಗಿ ಬಂದ ಕಾಳಮ್ಮ ಮನೆಯನ್ನು ಅಚ್ಚುಕಟ್ಟಾಗಿಯೇ ನಡೆಸಿದ್ದಳು. ಊರ ಪಶ್ಚಿಮದಲ್ಲಿ ಎರಡೆಕರೆ ಗದ್ದೆ, ಅದರಾಚೆಗೆ ಅವರ ಪಾಲಿನ ನಾಲ್ಕೆಕರೆ ಕಾಡಿನಲ್ಲಿ ಯಾಲಕ್ಕಿ ಹನಾಲು. ಇನ್ನು ಈ ಕಡೆ ಪೂರ್ವಕ್ಕೆ ಬಂದರೆ ದೇವರಬನದ ಆಚೆ ತಗ್ಗಿನಲ್ಲಿ ಎರಡೂವರೆ ಎಕರೆ ಗದ್ದೆ. ಅದರಾಚೆಗೆ, ಕಾಳಮ್ಮ ಮದುವೆಯಾಗಿ ಬಂದ ಮೇಲೆ ಊರ ಸಮೀಪ ಸ್ವಲ್ಪ ಜಾಗ ಇರಲಿ ಎಂದು ಗಂಡನಿಗೆ ಹುರಿದುಂಬಿಸಿ ದರಕಾಸ್ತಿನಲ್ಲಿ ಮಂಜೂರು ಮಾಡಿಸಿಕೊಂಡಿದ್ದ ಐದೆಕರೆ ಕುರೋವು ಇತ್ತು.

ಇನ್ನು ಊರ ಕಡೆಯಿಂದ ದೇವರ ಬನದ ದೀಣೆಗೆ ದಾಟುವ ಕೆರೆ ಏರಿಯ ಕೆಳಗೆ ಇದ್ದ ಒಂದೆಕರೆ ನೀರುಸನುಕಲು ಜಾಗ ಏನೂ ಬೆಳೆ ಬೆಳೆಯಲಾಗದೇ ಹಾಗೆಯೇ ಪಾಳುಬಿದ್ದಿತ್ತು.

ಕಾಳಮ್ಮ ದ್ಯಾವಪ್ಪಗೌಡ ದಂಪತಿಗೆ ಬದುಕಿ ಉಳಿದವರು ಮೂರು ಜನ ಮಕ್ಕಳು. ಪುಟ್ಟೇಗೌಡ, ಮಂಜುನಾಥ ಹಾಗೂ ಹೂವಮ್ಮ.

ಅದುವರೆಗೂ ಎಲ್ಲವೂ ಚೆನ್ನಾಗಿಯೇ ಇತ್ತು. ಅದೊಂದು ನೆಮ್ಮದಿಯ ಕುಟುಂಬ. ಮಕ್ಕಳು ಬೆಳೆದು ದೊಡ್ಡವರಾದರು. ಹಿರಿಯ ಮಗ ಪುಟ್ಟೇಗೌಡನಿಗೆ ಇಪ್ಪತ್ತಾರು ವರ್ಷ. ಮದುವೆಯ ವಯಸ್ಸು. ದೂರದ ಊರಿನಿಂದ, ನೋಡಲು ಚೆನ್ನಾಗಿದ್ದ ಕೆಂಪಮ್ಮನನ್ನು ಮದುವೆ ಮಾಡಿಕೊಂಡು ಬಂದರು. ಅವಳು ಸೊಸೆಯಾಗಿ ಬಂದ ಒಂದು ತಿಂಗಳಿಗೆಲ್ಲಾ ಅವಳ ಸ್ವಭಾವ ಮನೆಯವರಿಗಷ್ಟೇ ಅಲ್ಲ, ಊರವರಿಗೆಲ್ಲಾ ತಿಳಿದುಹೋಯಿತು. ದುರಹಂಕಾರದ ಆ ಹೆಣ್ಣು ಯಾರಿಗೂ ಬೆಲೆ ಕೊಡುವವಳಲ್ಲ. ಊರವರೆಲ್ಲಾ ಅವಳನ್ನು 'ಚಾಂಡಿ' ಎಂದು ಕರೆಯತೊಡಗಿದರು.

ಕಾಳಮ್ಮ ಹಾಗೂ ದ್ಯಾವಪ್ಪಗೌಡರನ್ನು ಮೂಲೆಗೆ ಸರಿಸಿದ ಚಾಂಡಿ ಮನೆಯ ಎಲ್ಲಾ ವ್ಯವಹಾರವನ್ನೂ ತನ್ನ ಕೈಗೆ ತೆಗೆದುಕೊಂಡಳು. ಮಿಕ್ಕವರದ್ದೆಲ್ಲಾ 'ಹೇಳಿದ್ದು ಕೇಳಿಕೊಂಡು, ಹಾಕಿದ್ದು ತಿನ್ನುವ' ಪರಿಸ್ಥಿತಿ. ಅವಳಿಗೆ ಹಣದ ದುರಾಸೆ ಬೇರೆ. ಇದ್ದ ಜಮೀನಿನಲ್ಲಿ ಬಂದ